C.C. ನಂಬರಃ 292/2020

ಪಿ. ಡಬ್ಲ್ಯೂಃ 6

ದಿಃ 20-03-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್.ಆರ್.ಎನ್. ವಕೀಲರಿಂದಃ</u>

ಪ್ರಕರಣಕ್ಕೆ ಸಂಬಂಧಿಸಿದ ಕಡತಗಳನ್ನು ಈ ದಿನ ತಂದಿದ್ದೇನೆ ಎಂದರೆ ಸರಿ. ನಾನು ತೆಗೆದುಕೊಂಡು ಬಂದ ದಾಖಲೆಯಲ್ಲಿ ಏನು ನಮೂದಿದೆ ಎಂದು ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ಪ್ರಕರಣದ ಕುರಿತಾಗಿ ನಾನು ನೀಡಿದ ಮಾಹಿತಿ ಕುರಿತಾಗಿ ಕಡತದಲ್ಲಿದೆ ಎಂದರೆ ಸರಿ. ಭದ್ರತಾ ಸಿಬ್ಬಂದಿಗಳು ಒಟ್ಟು 4 ಜನ ಇದ್ದು, ಪಾಳೆ ಪ್ರಕಾರ ನೇಮಕವಾಗುತ್ತಾರೆ. ಡಿಪೋದಲ್ಲಾಗುವ ಅವಗಡದ ಕುರಿತು ಭದ್ರತಾ ಸಿಬ್ಬಂದಿಗೆ ತಿಳಿಸಲಾಗುತ್ತದೆ ಎಂದರೆ ಸರಿ. ಸಿಬ್ಬಂದಿ ಡಿಪೋಗೆ ಬಂದು ಹೋದ ಬಗ್ಗೆ ಭದ್ರತಾ ಸಿಬ್ಬಂದಿ ಬಳಿ ನೊಂದಣಿ ಬುಕ್ ಇರುತ್ತದೆ ಎಂದರೆ ಸರಿ. ಸಾಕ್ಷಿ ಖಾಸಗಿ ವ್ಯಕ್ತಿಗಳಿಗೆ ಪ್ರತ್ಯೇಕ ರೆಜಿಸ್ಟರ್ ಇದೆ ಎಂದು ಹೇಳುತ್ತಾರೆ.

ಭದ್ರತಾ ಕೊಠಡಿ ಪಶ್ಚಿಮ ದಿಕ್ಕಿಗೆ ಮುಖ ಮಾಡಿದೆ. ವಾಹನಗಳು ಡಿಪೋದಿಂದ ಹೊರಹೋಗಬೇಕಾದರೆ ವಾಹನದ ಸಂಖ್ಯೆ ಹಾಗೂ ಚಾಲಕನ ವಿವರ ನೋಂದ ಬುಕ್ ದಲ್ಲಿ ಭದ್ರತಾ ಸಿಬ್ಬಂದಿ ಬರೆದುಕೊಳ್ಳುತ್ತಾರೆ. ಲಾಗ್ ಶೀಟ್ ಪೂರೈಸಿಯೇ ಬಸ್ಸು ಡಿಪೋದಿಂದ ಕಳುಹಿಸಲಾಗುತ್ತದೆ ಎಂದರೆ ಸರಿ. ಬಸ್ಸು ಯಾವ ರೂಟಿಗೆ

ಹೋಗುತ್ತದೆಯೆಂದು, ಚಾಲಕ ಹಾಗೂ ನಿರ್ವಾಹಕರ ವಿವರ, ಕಿ.ಮೀ ವಿವರ ಲಾಗ್ ಶೀಟ್ ನಲ್ಲಿ ಬರೆಯಲಾಗುತ್ತದೆ ಎಂದರೆ ಸಾಕ್ಷಿ ರೂಟ್, ಚಾಲಕ ಹಾಗೂ ನಿರ್ವಾಹಕರ ವಿವರ ಮಾತ್ರ ನಮೂದಿಸಲಾಗುತ್ತದೆ ಎಂದು ಹೇಳುತ್ತಾರೆ. ಲಾಗ್ ಶೀಟ್ ನಲ್ಲಿ ಕಿ.ಮೀ ವಿವರ ನಮೂದಿಸುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ಸು ತನ್ನ ರೂಟ್ ಮುಕ್ತಾಯಗೊಳಿಸಿ ಪುನಃ ಡಿಪೋಗೆ ಬಂದಾಗ ಲಾಗ್ ಶೀಟ್ ನಲ್ಲಿ ಕಿ.ಮೀ ಕ್ರಮಿಸಿದ ಬಗ್ಗೆ ಬರೆಯಲಾಗುತ್ತದೆ ಎಂದರೆ ಸರಿ. ಬಸ್ಸು ಎಷ್ಟು ಕಿ.ಮೀ. ಓಡಿದೆ ಎಂದು ಪರಿಶೀಲಿಸಲು ಲಾಗ್ ಶೀಟ್ ಹಾಗೂ ವಾಹನದ ರೀಡಿಂಗ್ ತಾಳೆ ಹಾಕುತ್ತೇವೆ ಎಂದರೆ ಸರಿ. ಸದರಿ ವಾಹನದ ಚಾಲನೆ ವಿವರದ ಮೇಲೆ ಎಷ್ಟು ಡಿಸೇಲ್ ಖರ್ಚಾಗುತ್ತದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ.

ಬಸ್ಸನ್ನು ಡ್ಯೂಟಿಗೆ ನೇಮಿಸುವ ಪೂರ್ವದಲ್ಲಿ ಅದರ ಸಾಮರ್ಥ್ಯ ಹಾಗೂ ಡಿಸೇಲ್ ಖರ್ಚಾಗುವ ವಿವರ ಪರೀಶೀಲಿಸುತ್ತೇವೆ ಎಂದರೆ ಸರಿ. ವಾಹನದ ಮೈಲೇಜ ಸರಾಸರಿ ವಿವರವನ್ನು ಇಂಧನ ಶಾಖೆಯಲ್ಲಿ ಇಡಲಾಗುತ್ತದೆ. ವಾಹನ ರೂಟ್ ಮುಗಿಸಿ ಬಂದ ನಂತರ ಅದಕ್ಕೆ ಖರ್ಚಾದ ಡಿಸೇಲ್ ವಿವರ ನೋಡಿಯೇ ವಾಹನದ ಮೈಲೇಜ ಕಂಡುಕೊಳ್ಳುತ್ತೇವೆ ಎಂದರೆ ಸರಿ.

ದಿಃ 30-07-2018 ರಂದು ಆರೋಪಿ ಘಟಕಕ್ಕೆ ಬಸ್ಸನ್ನು ತೆಗೆದುಕೊಂಡು ಬಂದ ನಂತರ ಇಂಧನ ತುಂಬಿಸಿದಾಗ ಸಾಯಂಕಾಲ 6.30 ಗಂಟೆ ಆಗಿತ್ತು. ಇಂಧನ ತುಂಬಿಸಿದ ಬಗ್ಗೆ ಪ್ರತ್ಯೇಕ ರಶೀದಿ ಬರುತ್ತದೆ ಎಂದರೆ ಸರಿ. ಆರೋಪಿ ನಡೆಸಿದ ಬಸ್ಸು

ಕಡಿಮೆ ಕಿ.ಮೀ. ಮೈಲೇಜ ತೋರಿಸುತ್ತಿದೆ ಎಂದು ಮೌಖಿಕವಾಗಿ ಅದೇ ದಿನ ಚಾಸಾ-1 ರವರಿಗೆ ಹೇಳಿದ್ದೇನೆ. ಆರೋಪಿ ನಡೆಸಿದ ಬಸ್ಸು ಕಡಿಮೆ ಮೈಲೇಜ ತೋರಿಸುತ್ತಿದೆ ಎಂದು ನನಗಿಂತ ಕಿರಿಯ ಅಧಿಕಾರಿ ನನಗೆ ತಿಳಿಸಿರುತ್ತಾನೆ. ಸದರಿ ವರದಿ ಮೇಲಿಂದ ನಾನು ಮರುದಿವಸ ಮೇಲಾಧಿಕಾರಿಗಳಿಗೆ ಲಿಖಿತವಾಗಿ ವರದಿ ನೀಡಿರುತ್ತೇನೆ. ಸದರಿ ವರದಿ ಜೊತೆ ಕಡಿಮೆ ಮೈಲೇಜ ತೋರಿಸಿದ ಬಗ್ಗೆ ಡಿಸೇಲ್ ವಿವರದ ಪ್ರತಿ ಸಲ್ಲಿಸಿದ್ದೇನೆ. ರಾಜೇಶ ಗೌಡ ಎಂಬುವವರು ಆರೋಪಿ ಬಸ್ಸಿಗೆ ಡಿಸೇಲ್ ತುಂಬಿಸಿದ ಕುರಿತು ನನಗೆ ಪ್ರಾಥಮಿಕ ವರದಿ ನೀಡಿದ್ದರು. ನಾನು ಮೇಲಾಧಿಕಾರಿಗಳಿಗೆ ವರದಿ ನೀಡುವಾಗ ಆರೋಪಿ ಬಸ್ಸಿನ ಲಾಗ್ ಶೀಟ್, ರಾಜೇಶ ಗೌಡನ ವರದಿ ಮತ್ತು ಡಿಸೇಲ್ ವಿವರದ ದಾಖಲೆ ನೀಡಿದ್ದೇನೆ.

ಆರೋಪಿ ನಡೆಸಿದ ಬಸ್ಸು ತಾಂತ್ರಿಕ ದೋಷದಿಂದ ಕೂಡಿದೆಯೇ ಎಂಬುವುದರ ಬಗ್ಗೆ ತಾಂತ್ರಿಕ ಸಿಬ್ಬಂದಿ ಪರಿಶೀಲಿಸಿರುತ್ತಾರೆ. ಸದರಿ ತಾಂತ್ರಿಕ ವರದಿಯನ್ನು ನಾನು ಸಲ್ಲಿಸಿದ ವರದಿ ಜೊತೆ ಸಲ್ಲಿಸಬೇಕು ಎಂದರೆ ಸರಿ. ತಾಂತ್ರಿಕ ವರದಿಯನ್ನು ನಾನು ಸಲ್ಲಿಸಿದ ವರದಿ ಜೊತೆಗೆ ಲಗತ್ತಿಸಿಲ್ಲ ಎಂದರೆ ಸರಿ. ತಾಂತ್ರಿಕ ದೋಷವಿರದ ಬಗ್ಗೆ ನಾನು ಮೌಖಿಕವಾಗಿ ಮೇಲಾಧಿಕಾರಿಗಳಿಗೆ ತಿಳಿಸಿದ್ದೇನೆ. ಆರೋಪಿ ನಡೆಸಿದ ಬಸ್ಸಿಗೆ ಹೆಚ್ಚು ಡಿಸೇಲ್ ತುಂಬಿಸಲಾಗಿದೆ ಎಂಬುವುದರ ಕುರಿತಾಗಿ ಹಾಗೂ ಸದರಿ ಬಸ್ಸು ಯಾವುದೇ ತಾಂತ್ರಿಕ ಸಮಸ್ಯೆಯಿಂದ ಕೂಡಿಲ್ಲವೆಂದು ನನ್ನ ವರದಿ ಜೊತೆ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವರದಿ ಸಲ್ಲಿಸಿದ ಬಸ್ಸ ನಂಬರ ನೆನಪಿನಿಂದ ಹೇಳಲು ಬರುವುದಿಲ್ಲ, ಆದರೆ ವರದಿಯಲ್ಲಿ ಬಸ್ ನಂಬರ ನಮೂದಿಸಿದ್ದೇನೆ.

(ಮುಂದುವರೆದ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ.ಎಂ.ಎಫ್.ಸಿ., ಅಂಕೋಲಾ.